# ಮತ ಕ್ಷೇತ್ರ: ಸಚಿವರ ಪಾತ್ರ?

## ಎಂಟು ಅಂಕ ಪಡೆದವರ ಯಾದಿಯಲ್ಲಿ ಏಳು ಸಚಿವರು...

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿ ಜನಪ್ರಿಯ, ಜನಪರ ಕಾರ್ಯಕ್ರಮಗಳನ್ನು ರೂಪಿಸಿದವರು ಅನೇಕರಿದ್ದಾರೆ. ಸಚಿವರಾಗಿ ಯಶಸ್ವಿಯಾದವರು, ಉತ್ತಮ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ ಎಂದು ಪ್ರತಿಪಾದಿಸುತ್ತಿರುವವರು ಶಾಸಕರಾಗಿ ತಮ್ಮ ಮತ ಕ್ಷೇತ್ರಕ್ಕೆ ಏನು ಕೊಡುಗೆ ಕೊಟ್ಟಿದ್ದಾರೆ?

ತಮ್ಮನ್ನು ನಂಬಿ ಮತ ಹಾಕಿದ 'ಮಹಾಪ್ರಭು'ಗಳ ನಿರೀಕ್ಷೆ, ಅಪೇಕ್ಷೆಗಳಿಗೆ ನಾಲ್ಕು ಮುಕ್ಕಾಲು ವರ್ಷ ಸರ್ಕಾರವನ್ನು ಮುನ್ನಡೆಸಿದವರು ಎಷ್ಟರಮಟ್ಟಿಗೆ ಸ್ಪಂದಿಸಿದ್ದಾರೆ ಎಂಬುದನ್ನು ಸಮೀಕ್ಷೆಯಲ್ಲಿ ಸಿಕ್ಕಿದ ಅಂಕಿ–ಅಂಶಗಳ ಮೂಲಕವೇ ತೋರಿಸುವ ವಿಶ್ಲೇಷಣೆ ಇಲ್ಲಿದೆ. ಮತದಾರರ ಅಭಿಪ್ರಾಯ ಆಧರಿಸಿ, ಸಚಿವರಿಗೆ ಅಂಕ ನೀಡಲಾಗಿದೆ. ಅದನ್ನಷ್ಟೇ ಇಲ್ಲಿ ಕ್ರೋಡೀಕರಿಸಲಾಗಿದೆ.

ಸಚಿವರ ಪೈಕಿ ಗಣಿ ಮತ್ತು ಭೂವಿಜ್ಞಾನ ಸಚಿವ ವಿನಯ ಕುಲಕರ್ಣಿ ಅಗ್ರ ಶ್ರೇಯಾಂಕದಲ್ಲಿದ್ದರೆ, ಗೃಹ ಸಚಿವ ರಾಮಲಿಂಗಾರೆಡ್ಡಿ ಕೊನೆಯ ಸ್ಥಾನದಲ್ಲಿದ್ದಾರೆ.

**ನುಡಿದಂತೆ. . .:** ಸಿದ್ದರಾಮಯ್ಯ ಸರ್ಕಾರದಲ್ಲಿ ಲೋಕ ನಿಷ್ಠುರಿಗಳು, ಜನಪರ ಕಳಕಳಿ ಇರುವವರೆಂದು ಬಿಂಬಿತವಾಗಿರುವ ಕಂದಾಯ ಸಚಿವ ಕಾಗೋಡು ತಿಮ್ಮಪ್ಪ, ಆರೋಗ್ಯ ಸಚಿವ ಕೆ.ಆರ್. ರಮೇಶಕುಮಾರ್ ಅವರು ಆಡಳಿತ ಪಕ್ಷದೊಳಗಿನ ವಿರೋಧ ಪಕ್ಷದ ಸದಸ್ಯರಂತೆ ಇದ್ದಾರೆ. ಹಾಗೆಂದು ಇಬ್ಬರೂ ಸತತ ಎರಡು ಚುನಾವಣೆಗಳಲ್ಲಿ ಗೆದ್ದಿರುವ ನಿದರ್ಶನ ವಿರಳ. ಕ್ಷೇತ್ರದಲ್ಲಿ ಒಲವು ಇದ್ದರೂ ಗೆಲುವು ಇವರಿಗೆ ಎಂದಿಗೂ ಸಲೀಸಾಗಿಲ್ಲ.

ಕಾನೂನು ಸಚಿವ ಟಿ.ಬಿ. ಜಯಚಂದ್ರ ಒಂದು ಬಾರಿ ಮಾತ್ರ ಸೋಲುಂಡವರು. ಮೂರನೇ ಬಾರಿ ಗೆದ್ದ ಶರಣ ಪ್ರಕಾಶ ಪಾಟೀಲ, ಎರಡನೇ ಬಾರಿ ಗೆದ್ದ ವಿನಯ ಕುಲಕರ್ಣಿ ಈಗ ಸಚಿವರು. ಎಚ್.ಕೆ. ಪಾಟೀಲ ಹಾಗೂ ಪ್ರಿಯಾಂಕ್ ಖರ್ಗೆ ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾದವರು. ಸಚಿವರ ಯಾದಿಯಲ್ಲಿ ಈ ಏಳೂ ಜನ 10ಕ್ಕೆ 8ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ.

ಸರ್ಕಾರದ ಅವಧಿ ಮೂರು ವರ್ಷ ತುಂಬುವವರೆಗೆ ಕಾಗೋಡು ಸಭಾಧ್ಯಕ್ಷರಾಗಿದ್ದರು. ರಮೇಶ್ ಕುಮಾರ್ ಶಾಸಕರಾಗಿದ್ದರು. ಸಮೀಕ್ಷೆಯಲ್ಲಿ ಇವರಿಬ್ಬರೂ ಕ್ರಮವಾಗಿ 8.04 ಹಾಗೂ 8.22 ಅಂಕ ಗಳಿಸಿದ್ದಾರೆ. ಜಯಚಂದ್ರ ಮತ್ತು ಎಚ್.ಕೆ. ಪಾಟೀಲ ತಲಾ 8.19 ಅಂಕ ಪಡೆದಿದ್ದಾರೆ.

ಎಚ್.ಸಿ. ಮಹದೇವಪ್ಪ, ರಮಾನಾಥ ರೈ, ಬಸವ ರಾಜ ರಾಯರಡ್ಡಿ, ರಮೇಶ ಜಾರಕಿಹೊಳಿ ಒಟ್ಟಾರೆ ಅಂಕ ಗಳಿಕೆಯಲ್ಲಿ ಹಿಂದೆ ಬಿದ್ದಿದ್ದಾರೆ. ಆದರೆ, ಶಾಸಕರು ಜನರ ಕೈಗೆ ಎಟುಕುತ್ತಾರೆಯೇ ಎಂಬ ಪ್ರಶ್ನೆಗೆ ಇವರೆಲ್ಲ 8ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ.

ಮಹದೇವಪ್ಪ, ರೋಷನ್ ಬೇಗ್, ಆಂಜನೇಯ, ರಾಯರಡ್ಡಿ, ರುದ್ರಪ್ಪ ಲಮಾಣಿ, ಎ.ಮಂಜು, ಎಸ್. ಎಸ್. ಮಲ್ಲಿಕಾರ್ಜುನ, ಎಂ.ಬಿ. ಪಾಟೀಲ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕೆಲವರು ಏಳರ ಸಮೀಪ ಸಾಗಿದರೂ ಏಳು ದಾಟುವಲ್ಲಿ ಯಶ ಕಂಡಿಲ್ಲ.

### ರಾಜಧಾನಿಯವರ ಸಾಧನೆ

ಬೆಂಗಳೂರನ್ನು ಪ್ರತಿನಿಧಿಸುವ ಸಚಿವರ ಪೈಕಿ ವಸತಿ ಸಚಿವ ಎಂ. ಕೃಷ್ಣಪ್ಪ, ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಮುಂದೆ ಇದ್ದಾರೆ. ಬೇಗ್, ಕೃಷ್ಣ ಬೈರೇಗೌಡ, ರಾಮಲಿಂಗಾರೆಡ್ಡಿ ಹಿಂದೆ ಬಿದ್ದಿದ್ದಾರೆ. ಬೆಂಗಳೂರಿನಲ್ಲೇ ನೆಲೆಸಿರುವ ಕನಕಪುರ ಕ್ಷೇತ್ರದ ಶಾಸಕ, ಇಂಧನ ಸಚಿವ ಡಿ.ಕೆ. ಶಿವಕುಮಾರ್ ಕೂಡ 6.6 ಅಂಕ ಪಡೆದಿದ್ದಾರೆ.

ಶಾಸಕರು ಕೈಗೆ ಸಿಗುತ್ತಾರೆಯೇ ಎಂಬ ವಿಷಯದಲ್ಲಿ ಶಿವಕುಮಾರ್ ಅತ್ಯಂತ ಕಡಿಮೆ ಅಂಕ ಪಡೆದಿದ್ದು, ಈ ವಿಷಯದಲ್ಲಿ ರೆಡ್ಡಿ ಸ್ವಲ್ಪ ಹೆಚ್ಚು ಅಂಕ ಗಳಿಸಿದ್ದಾರೆ.

### ಟಿ.ಬಿ. ಜಯಚಂದ್ರ
ಕಾಂಗ್ರೆಸ್
ಜಿಲ್ಲೆ: ತುಮಕೂರು
ಕ್ಷೇತ್ರ: ಸಿರಾ



8.19/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.89 |
| ಕುಡಿಯುವ ನೀರು | 8.33 |
| ವಿದ್ಯುತ್ | 7.78 |
| ರಸ್ತೆ | 8.89 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |

### ರಾಮಲಿಂಗಾ ರೆಡ್ಡಿ
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಬಿಟಿಎಂ ಲೇಔಟ್



5.7/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.61 |
| ಕುಡಿಯುವ ನೀರು | 6.67 |
| ವಿದ್ಯುತ್ | 6.57 |
| ರಸ್ತೆ | 6.67 |
| ಶಾಸಕರು ಕೈಗೆ ಸಿಗುತ್ತಾರಾ? | 4.89 |

### ಬಿ. ರಮಾನಾಥ ರೈ
ಕಾಂಗ್ರೆಸ್
ಜಿಲ್ಲೆ: ದಕ್ಷಿಣ ಕನ್ನಡ
ಕ್ಷೇತ್ರ: ಬಂಟ್ವಾಳ



7.43/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.85 |
| ಕುಡಿಯುವ ನೀರು | 7.92 |
| ವಿದ್ಯುತ್ | 8.02 |
| ರಸ್ತೆ | 8.85 |
| ಶಾಸಕರು ಕೈಗೆ ಸಿಗುತ್ತಾರಾ? | 9.06 |

### ಡಾ. ಎಚ್.ಸಿ. ಮಹದೇವಪ್ಪ
ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ತಿ.ನರಸೀಪುರ



6.54/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.75 |
| ಕುಡಿಯುವ ನೀರು | 9.17 |
| ವಿದ್ಯುತ್ | 8.5 |
| ರಸ್ತೆ | 8.42 |
| ಶಾಸಕರು ಕೈಗೆ ಸಿಗುತ್ತಾರಾ? | 8.5 |

### ಕೆ.ಜೆ. ಜಾರ್ಜ್
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಸರ್ವಜ್ಞ ನಗರ



7.9/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.06 |
| ಕುಡಿಯುವ ನೀರು | 8.06 |
| ವಿದ್ಯುತ್ | 8.67 |
| ರಸ್ತೆ | 8.18 |
| ಶಾಸಕರು ಕೈಗೆ ಸಿಗುತ್ತಾರಾ? | 7.72 |

### ಎಚ್. ಆಂಜನೇಯ
ಕಾಂಗ್ರೆಸ್
ಜಿಲ್ಲೆ: ಚಿತ್ರದುರ್ಗ
ಕ್ಷೇತ್ರ: ಹೊಳಲ್ಕೆರೆ



6.92/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.78 |
| ಕುಡಿಯುವ ನೀರು | 7.11 |
| ವಿದ್ಯುತ್ | 6.78 |
| ರಸ್ತೆ | 6.78 |
| ಶಾಸಕರು ಕೈಗೆ ಸಿಗುತ್ತಾರಾ? | 7.56 |

### ರೋಷನ್ ಬೇಗ್
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಶಿವಾಜಿನಗರ



6.70/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.89 |
| ಕುಡಿಯುವ ನೀರು | 6.61 |
| ವಿದ್ಯುತ್ | 6.94 |
| ರಸ್ತೆ | 6.89 |
| ಶಾಸಕರು ಕೈಗೆ ಸಿಗುತ್ತಾರಾ? | 6.72 |


### ಡಿ.ಕೆ. ಶಿವಕುಮಾರ್
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ಗ್ರಾಮಾಂತರ
ಕ್ಷೇತ್ರ: ಕನಕಪುರ



6.66/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.7 |
| ಕುಡಿಯುವ ನೀರು | 6.6 |
| ವಿದ್ಯುತ್ | 6.5 |
| ರಸ್ತೆ | 6.9 |
| ಶಾಸಕರು ಕೈಗೆ ಸಿಗುತ್ತಾರಾ? | 4.7 |

### ಕೆ.ಆರ್. ರಮೇಶ್‌ಕುಮಾರ್
ಕಾಂಗ್ರೆಸ್
ಜಿಲ್ಲೆ: ಕೋಲಾರ
ಕ್ಷೇತ್ರ: ಶ್ರೀನಿವಾಸಪುರ



8.22/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.18 |
| ಕುಡಿಯುವ ನೀರು | 8.48 |
| ವಿದ್ಯುತ್ | 9.37 |
| ರಸ್ತೆ | 8.79 |
| ಶಾಸಕರು ಕೈಗೆ ಸಿಗುತ್ತಾರಾ? | 8.18 |

### ಕಾಗೋಡು ತಿಮ್ಮಪ್ಪ
ಕಾಂಗ್ರೆಸ್
ಜಿಲ್ಲೆ: ಶಿವಮೊಗ್ಗ
ಕ್ಷೇತ್ರ: ಸಾಗರ



8.04/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8 |
| ಕುಡಿಯುವ ನೀರು | 8.07 |
| ವಿದ್ಯುತ್ | 8.07 |
| ರಸ್ತೆ | 8 |
| ಶಾಸಕರು ಕೈಗೆ ಸಿಗುತ್ತಾರಾ? | 8.07 |

### ಡಾ. ಶರಣ ಪ್ರಕಾಶ್ ಪಾಟೀಲ
ಕಾಂಗ್ರೆಸ್
ಜಿಲ್ಲೆ: ಕಲಬುರ್ಗಿ
ಕ್ಷೇತ್ರ: ಸೇಡಂ



8.48/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.52 |
| ಕುಡಿಯುವ ನೀರು | 9.21 |
| ವಿದ್ಯುತ್ | 9.84 |
| ರಸ್ತೆ | 9.37 |
| ಶಾಸಕರು ಕೈಗೆ ಸಿಗುತ್ತಾರಾ? | 9.83 |

### ರಮೇಶ ಜಾರಕಿಹೊಳಿ
ಕಾಂಗ್ರೆಸ್
ಜಿಲ್ಲೆ: ಬೆಳಗಾವಿ
ಕ್ಷೇತ್ರ: ಗೋಕಾಕ



7.62/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.11 |
| ಕುಡಿಯುವ ನೀರು | 7.28 |
| ವಿದ್ಯುತ್ | 8.06 |
| ರಸ್ತೆ | 7.94 |
| ಶಾಸಕರು ಕೈಗೆ ಸಿಗುತ್ತಾರಾ? | 9.89 |

### ಸಂತೋಷ್ ಎಸ್. ಲಾಡ್
ಕಾಂಗ್ರೆಸ್
ಜಿಲ್ಲೆ: ಧಾರವಾಡ
ಕ್ಷೇತ್ರ: ಕಲಘಟಗಿ



7.46/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.49 |
| ಕುಡಿಯುವ ನೀರು | 7.61 |
| ವಿದ್ಯುತ್ | 7.46 |
| ರಸ್ತೆ | 7.49 |
| ಶಾಸಕರು ಕೈಗೆ ಸಿಗುತ್ತಾರಾ? | 7.33 |

### ಬಸವರಾಜ ರಾಯರಡ್ಡಿ
ಕಾಂಗ್ರೆಸ್
ಜಿಲ್ಲೆ: ಕೊಪ್ಪಳ
ಕ್ಷೇತ್ರ: ಯಲಬುರ್ಗಾ



6.63/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.94 |
| ಕುಡಿಯುವ ನೀರು | 8.28 |
| ವಿದ್ಯುತ್ | 7.61 |
| ರಸ್ತೆ | 7.28 |
| ಶಾಸಕರು ಕೈಗೆ ಸಿಗುತ್ತಾರಾ? | 8.17 |

### ಎಂ. ಕೃಷ್ಣಪ್ಪ
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ವಿಜಯನಗರ



7.12/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.19 |
| ಕುಡಿಯುವ ನೀರು | 7.24 |
| ವಿದ್ಯುತ್ | 7.18 |
| ರಸ್ತೆ | 7.24 |
| ಶಾಸಕರು ಕೈಗೆ ಸಿಗುತ್ತಾರಾ? | 7.3 |

### ಎ. ಮಂಜು
ಕಾಂಗ್ರೆಸ್
ಜಿಲ್ಲೆ: ಹಾಸನ
ಕ್ಷೇತ್ರ: ಅರಕಲಗೂಡು



5.97/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.78 |
| ಕುಡಿಯುವ ನೀರು | 6.17 |
| ವಿದ್ಯುತ್ | 6.56 |
| ರಸ್ತೆ | 6.72 |
| ಶಾಸಕರು ಕೈಗೆ ಸಿಗುತ್ತಾರಾ? | 6.17 |

### ರುದ್ರಪ್ಪ ಲಮಾಣಿ
ಕಾಂಗ್ರೆಸ್
ಜಿಲ್ಲೆ: ಹಾವೇರಿ
ಕ್ಷೇತ್ರ: ಹಾವೇರಿ



6.82/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.21 |
| ಕುಡಿಯುವ ನೀರು | 6.73 |
| ವಿದ್ಯುತ್ | 6.94 |
| ರಸ್ತೆ | 7.69 |
| ಶಾಸಕರು ಕೈಗೆ ಸಿಗುತ್ತಾರಾ? | 6.8 |

### ಈಶ್ವರ ಖಂಡ್ರೆ
ಕಾಂಗ್ರೆಸ್
ಜಿಲ್ಲೆ: ಬೀದರ್
ಕ್ಷೇತ್ರ: ಭಾಲ್ಕಿ



7.54/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.10 |
| ಕುಡಿಯುವ ನೀರು | 8.07 |
| ವಿದ್ಯುತ್ | 7.79 |
| ರಸ್ತೆ | 7.44 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |

## ಕೇಳಲಾದ ಪ್ರಶ್ನೆಗಳು

1. ಕಾನೂನು ಮತ್ತು ಸುವ್ಯವಸ್ಥೆ
2. ಉತ್ತಮ ಸಾರಿಗೆ ವ್ಯವಸ್ಥೆ
3. ಉತ್ತಮ ರಸ್ತೆ
4. ಶಾಸಕರ ಲಭ್ಯತೆ
5. ಉತ್ತಮ ವಿದ್ಯುತ್ ಸೌಲಭ್ಯ
6. ಉದ್ಯೋಗಾವಕಾಶ
7. ಉದ್ಯೋಗ ಮತ್ತು ಶಿಕ್ಷಣ
8. ಉದ್ಯೋಗ ತರಬೇತಿ
9. ಶಾಸಕರ ವಿಶ್ವಾಸಾರ್ಹತೆ
10. ಆಸ್ಪತ್ರೆಗಳು
11. ಮಹಿಳಾ ಸುರಕ್ಷತೆ
12. ಕೃಷಿ ಸಾಲ ಲಭ್ಯತೆ
13. ಕೃಷಿಗೆ ಸಾಕಷ್ಟು ಉದ್ಯೋಗ ಪೂರೈಕೆ
14. ಆಹಾರ ಸಬ್ಸಿಡಿ ವಿತರಣೆ
15. ಒಳಚರಂಡಿ ವ್ಯವಸ್ಥೆ
16. ಗುಣಮಟ್ಟದ ನೀರು ಪೂರೈಕೆ
17. ಭಯೋತ್ಪಾದಕ ನಿಗ್ರಹ
18. ಉತ್ತಮ ಶಾಲೆಗಳು
19. ಪರಿಸರ ಸಂರಕ್ಷಣೆ
20. ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ
21. ನೀರಾವರಿ ಯೋಜನೆಗಳು
22. ಬಿತ್ತನೆ ಬೀಜ, ರಸಗೊಬ್ಬರ ಸಬ್ಸಿಡಿ
23. ಕಸ ವಿಲೇವಾರಿ
24. ಭ್ರಷ್ಟಾಚಾರ ನಿಗ್ರಹ
25. ಕೆರೆ ಪುನರುಜ್ಜೀವನ
26. ಪಾರ್ಕಿಂಗ್ ಸೌಲಭ್ಯ
27. ಉದ್ಯಾನಗಳ ನಿರ್ವಹಣೆ
28. ಸಂಚಾರ ವ್ಯವಸ್ಥೆ


### ಅಂಕ 'ಗಣಿತ'

'ದಕ್ಷ್' ನಡೆಸಿದ ಸಮೀಕ್ಷೆ ವೇಳೆ ಮತದಾರರಿಗೆ 28 ಪ್ರಶ್ನೆಗಳನ್ನು ಕೇಳಲಾಗಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸೀಮಿತವಾಗಿ ಕೆಲವು ನಿರ್ದಿಷ್ಟ ಪ್ರಶ್ನೆಗಳೂ ಇದ್ದವು.

ಈ ಎಲ್ಲ ವಿಷಯಗಳಲ್ಲಿ ಶಾಸಕರು ಪಡೆದಿರುವ ಅಂಕಗಳನ್ನು ಕ್ರೋಡೀಕರಿಸಿ, ಒಟ್ಟು 10 ಅಂಕಗಳಲ್ಲಿ ಅವರು ಗಳಿಸಿರುವ ಅಂಕಗಳನ್ನು ನೀಡಲಾಗಿದೆ. ಜನರು ಅತಿ ಮುಖ್ಯ ಪರಿಗಣಿಸಿರುವ ಐದು ಕ್ಷೇತ್ರಗಳಲ್ಲಿ ಶಾಸಕರು ಪಡೆದ ಅಂಕಗಳನ್ನು ಮಾತ್ರ ಪ್ರತ್ಯೇಕವಾಗಿ ನೀಡಲಾಗಿದೆ.

# ಯಾವ ವಲಯದಲ್ಲಿ ಯಾರಿಗೆ ಒಲವು?

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ರಾಜ್ಯದ ಯಾವ ಭಾಗದಲ್ಲಿ ಯಾವ ಪಕ್ಷದ ಶಾಸಕರು ಉತ್ತಮ ಕೆಲಸ ಮಾಡಿದ್ದಾರೆ ಎಂಬ ಮಾಹಿತಿ ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ.

ಶಾಸಕರ ಸಾಮರ್ಥ್ಯ, ಕ್ಷೇತ್ರದ ಅಭಿವೃದ್ಧಿಯತ್ತ ಅವರಿಗಿರುವ ಕಾಳಜಿಯನ್ನು ಮೌಲ್ಯಮಾಪನ ಮಾಡಲು **'ಪ್ರಜಾವಾಣಿ'** ಜತೆ **'ದಕ್ಷ್'** ಸಂಸ್ಥೆ ಕೈಜೋಡಿಸಿದೆ. ಶಾಸಕರ ಕಾರ್ಯವೈಖರಿ, ಜನರ ಸಮಸ್ಯೆಗಳಿಗೆ ಜನಪ್ರತಿನಿಧಿಯ ಗಮನ ಮತ್ತಿತರ ವಿಷಯಗಳ ಕುರಿತು ಸಮೀಕ್ಷೆ ವೇಳೆ 28 ಪ್ರಶ್ನೆಗಳನ್ನು ಕೇಳಲಾಗಿದೆ. ಅದನ್ನು ಕ್ರೋಡೀಕರಿಸಿ 10 ಅಂಕಗಳಿಗೆ ಶಾಸಕರು ಹಾಗೂ ಪಕ್ಷ ಪಡೆದ ಅಂಕವನ್ನು ನೀಡಲಾಗಿದೆ. ಸಮೀಕ್ಷೆಯಲ್ಲಿ ಸಂಗ್ರಹಿಸಿದ ದತ್ತಾಂಶಗಳನ್ನು ಪ್ರದೇಶವಾರು ವಿಭಜಿಸಿ, ಪಕ್ಷವಾರು ಪಡೆದ ಅಂಕಗಳನ್ನು ವಿಶ್ಲೇಷಿಸುವ ಯತ್ನವನ್ನು ಇಲ್ಲಿ ಮಾಡಲಾಗಿದೆ.

**ಕರಾವಳಿಯಲ್ಲಿ 'ಕೈ'ಗೆ ಜೈ:** ಕರಾವಳಿ ಕರ್ನಾಟಕದ ಮೂರು ಜಿಲ್ಲೆಗಳ ವಿಷಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಹಾಗೂ ವಿರೋಧ ಪಕ್ಷದ ನಾಯಕರ ಮಧ್ಯೆ ವಾಗ್ವಾದ ನಡೆಯುತ್ತಲೇ ಇದೆ. ಕಾಂಗ್ರೆಸ್ ಆಳ್ವಿಕೆಯಲ್ಲಿ ಅಭಿವೃದ್ಧಿ ಕುಸಿದಿದೆ ಎಂದು ಬಿಜೆಪಿಯವರು ಟೀಕಾ ಪ್ರಹಾರ ಮಾಡುತ್ತಲೇ ಇದ್ದಾರೆ. ಈ ಭಾಗದಲ್ಲಿ ಕಾಂಗ್ರೆಸ್ ಶಾಸಕರ ಸಂಖ್ಯೆ ಹೆಚ್ಚಿದ್ದು, ಅವರೇ ಹೆಚ್ಚಿನ ಅಂಕ ಗಳಿಸಿದ್ದಾರೆ. ಅಭಿವೃದ್ಧಿಯೇ ನಮ್ಮ ಮಂತ್ರ ಎಂದು ಘೋಷಿಸಿಕೊಳ್ಳುತ್ತಿರುವ ಬಿಜೆಪಿ ಶಾಸಕರು ಎರಡನೇ ಸ್ಥಾನಕ್ಕೆ ಹೋಗಿದ್ದಾರೆ. ಕರಾವಳಿಯಲ್ಲಿ ಜೆಡಿಎಸ್ ಶಾಸಕರು ಇಲ್ಲ.

ಮುಂಬೈ ಕರ್ನಾಟಕಲ್ಲಿ ಬಿಜೆಪಿ–ಕಾಂಗ್ರೆಸ್ ಶಾಸಕರ ಸಂಖ್ಯೆ ಸರಿ ಸುಮಾರು ಸಮಬಲದಲ್ಲಿದೆ. ಪ್ರಭಾವಿ ನಾಯಕರೂ ಈ ಭಾಗದಲ್ಲಿದ್ದಾರೆ. ಜೆಡಿಎಸ್ ಪ್ರಾತಿನಿಧ್ಯ ಕೂಡ ಇದೆ. ಅಭಿವೃದ್ಧಿಯ ಪರ್ವ ಆರಂಭವಾಗಿದ್ದೇ ನಮ್ಮ ಕಾಲದಲ್ಲಿ ಎಂದು ಕಾಂಗ್ರೆಸ್ ಸರ್ಕಾರದ ಸಚಿವರು ಹೆಗ್ಗಳಿಕೆಯಿಂದ ಹೇಳಿಕೊಳ್ಳುತ್ತಾರೆ. ಆದರೆ, ಈ ಪ್ರದೇಶದಲ್ಲಿ ನಡೆದ ಸಮೀಕ್ಷೆಯಲ್ಲಿ ಕಾಂಗ್ರೆಸ್‌ಗೆ ಸಿಕ್ಕಿದ್ದು ಎರಡನೇ ಸ್ಥಾನ. ಬಿಜೆಪಿ 7.69 ಅಂಕ ಪಡೆದು ಮೊದಲ ಸ್ಥಾನದಲ್ಲಿದೆ. ಜೆಡಿಎಸ್ 6.09ಗೆ ತೃಪ್ತಿಪಟ್ಟುಕೊಂಡಿದೆ.


**ಹೈ–ಕದಲ್ಲಿ ಕಮಲಕ್ಕೆ ರಂಗು:** ಹೈದರಾಬಾದ್ ಕರ್ನಾಟಕದ ಆರು ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪ್ರಾಬಲ್ಯ ಇದೆ. ಬಿಜೆಪಿ, ಜೆಡಿಎಸ್ ಕೂಡ ಪ್ರಾತಿನಿಧ್ಯ ಪಡೆದಿವೆ. ಯಾವ ಪಕ್ಷ ಹೆಚ್ಚಿನ ಪ್ರಭಾವ ಹೊಂದಿದೆ ಎಂಬ ಬಗ್ಗೆ ನಡೆದ ಖಾಸಗಿ ಸಮೀಕ್ಷೆಯಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿತ್ತು. ಆದರೆ, ಶಾಸಕರ ಸಾಧನೆ ಆಧರಿಸಿ ಪಕ್ಷ ಪಡೆದ ಅಂಕಗಳನ್ನು ಗಮನಿಸಿದರೆ, ಬಿಜೆಪಿ ಹೆಚ್ಚಿನ ಅಂಕ ಪಡೆದು ಮೊದಲ ಸಾಲಿನಲ್ಲಿದೆ. ಅದಕ್ಕಿಂತ 0.08ರಷ್ಟು ಕಡಿಮೆ ಅಂಕವನ್ನು ಕಾಂಗ್ರೆಸ್ ಪಡೆದಿದೆ.

ಮಧ್ಯ ಕರ್ನಾಟಕದ (ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ) ಮೂರು ಜಿಲ್ಲೆಗಳ ಶಾಸಕರ ಪೈಕಿ ಕಾಂಗ್ರೆಸ್ ಅತಿ ಹೆಚ್ಚು ಶಾಸಕರನ್ನು ಹೊಂದಿದೆ. ಬಿಜೆಪಿ ಪ್ರಾತಿನಿಧ್ಯವೂ ಇದೆ. ಆಡಳಿತ ಪಕ್ಷ ಕಾಂಗ್ರೆಸ್ ಎರಡನೇ ಸ್ಥಾನದಲ್ಲಿದೆ. ಈ ಪ್ರದೇಶದಲ್ಲಿ ಜೆಡಿಎಸ್ ಸದಸ್ಯರ ಸಂಖ್ಯೆ (4 ಶಾಸಕರು) ಕಡಿಮೆ ಇದ್ದರೂ 7.33 ಅಂಕ ಗಳಿಸಿದೆ.

**ಹಳೆ ಮೈಸೂರಿನ ಲೆಕ್ಕ:** ಹಳೆ ಮೈಸೂರು ಭಾಗದಲ್ಲಿ ಕಡಿಮೆ ಶಾಸಕರನ್ನು ಹೊಂದಿರುವ ಬಿಜೆಪಿ ಮೊದಲ ಸ್ಥಾನದಲ್ಲಿದೆ. ಕಾಂಗ್ರೆಸ್ ಅತಿ ಹೆಚ್ಚಿನ ಶಾಸಕರ ಪ್ರಾತಿನಿಧ್ಯ ಹೊಂದಿದ್ದರೆ, ಸಂಖ್ಯಾಬಲದಲ್ಲಿ ಜೆಡಿಎಸ್ ಎರಡನೇ ಸ್ಥಾನದಲ್ಲಿದೆ. ಇಲ್ಲಿ ಕಾಂಗ್ರೆಸ್ ಮೂರನೇ ಸ್ಥಾನದಲ್ಲಿದ್ದರೆ, ಜೆಡಿಎಸ್ 7.12 ಅಂಕ ಪಡೆದು ಎರಡನೇ ಸ್ಥಾನ ದಕ್ಕಿಸಿಕೊಂಡಿದೆ.

ಬಿಬಿಎಂಪಿ ವ್ಯಾಪ್ತಿಯ 28 ಕ್ಷೇತ್ರಗಳಲ್ಲಿ ಕಾಂಗ್ರೆಸ್– ಬಿಜೆಪಿ ಶಾಸಕರು ಸರಿಸುಮಾರು ಸಮಾನ ಪ್ರಾತಿನಿಧ್ಯ ಹೊಂದಿದ್ದಾರೆ. ಆದರೆ, ಅಂಕ ಗಳಿಕೆಯಲ್ಲಿ ಜೆಡಿಎಸ್ ಮೊದಲ ಸ್ಥಾನದಲ್ಲಿದೆ. ಆಡಳಿತಾರೂಢ ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ಕುಸಿದಿದೆ.

### ವಲಯವಾರು ಪಕ್ಷಗಳ ಸಾಧನೆ (10 ಅಂಕಗಳಲ್ಲಿ)




## ಕಡಿಮೆ ಶಾಸಕರಿದ್ದ ಕಡೆ ಹೆಚ್ಚು ಅಂಕ

ಶಾಸಕರ ಸಂಖ್ಯೆ ಕಡಿಮೆ ಇದ್ದ ಪ್ರದೇಶಗಳಲ್ಲಿ ಪಕ್ಷವಾರು ಅಂಕ ಗಳಿಕೆ ಹೆಚ್ಚಾಗಿದೆ. ಹಳೆ ಮೈಸೂರು ಪ್ರದೇಶದಲ್ಲಿ ಬಿಜೆಪಿ ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಜೆಡಿಎಸ್ ತಲಾ ಮೂವರು ಶಾಸಕರನ್ನು ಹೊಂದಿವೆ. ಮಧ್ಯ ಕರ್ನಾಟಕದಲ್ಲಿ ಜೆಡಿಎಸ್‌ನ ಇಬ್ಬರು ಶಾಸಕರು ಇದ್ದಾರೆ. ಆದರೆ, ಅಂಕ ಗಳಿಕೆಯಲ್ಲಿ ಬಿಜೆಪಿ, ಜೆಡಿಎಸ್ ಹೆಚ್ಚಿನ ಸಾಧನೆ ಮಾಡಿವೆ.

ಒಂದು ಪ್ರದೇಶದಲ್ಲಿ ನಿರ್ದಿಷ್ಟ ಪಕ್ಷಕ್ಕೆ ಸೇರಿರುವ ಶಾಸಕರ ಸಂಖ್ಯೆ ಹೆಚ್ಚಿದ್ದು, ಅವರ ಪೈಕಿ ಕಡಿಮೆ ಅಂಕ ಪಡೆದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ಸರಾಸರಿ ಗಣಕ ಮಾಡಿದಾಗ ಪಕ್ಷ ಪಡೆದ ಅಂಕ ಇಳಿಕೆಯಾಗುತ್ತದೆ.

ಉದಾಹರಣೆಗೆ, ಹಳೆ ಮೈಸೂರು ಭಾಗದಲ್ಲಿ ಬಿಜೆಪಿ ಮೂವರು ಶಾಸಕರನ್ನು ಮಾತ್ರ ಹೊಂದಿದೆ. ಮೂವರೂ 6.8ರಿಂದ 7.47ವರೆಗಿನ ಅಂಕ ಪಡೆದಿದ್ದರೆ, ಸರಾಸರಿ ಲೆಕ್ಕ ಮಾಡುವಾಗ ಪಕ್ಷದ ಅಂಕ ಅಂದಾಜು 7 ದಾಟುತ್ತದೆ. ಒಂದು ಪಕ್ಷದ 40ಕ್ಕೂ ಹೆಚ್ಚು ಶಾಸಕರಿರುವ ಪ್ರದೇಶಗಳಲ್ಲಿ 20ಕ್ಕೂ ಹೆಚ್ಚು ಶಾಸಕರು 6, ಹತ್ತು ಜನ 4 ಹಾಗೂ ಉಳಿದ ಹತ್ತು ಜನ 8 ಅಂಕ ಪಡೆದಿದ್ದರೆ, ಸರಾಸರಿ ಲೆಕ್ಕ ಹಾಕುವಾಗ ಪಕ್ಷವಾರು ಅಂಕ ಇಳಿಕೆಯಾಗುತ್ತದೆ.

## ಏಳಕ್ಕೇರದ ಸಭಾಧ್ಯಕ್ಷ ಕೋಳಿವಾಡ

224 ಶಾಸಕರಿಗೆ ಉತ್ತರದಾಯಿಯಾಗಿರುವ ವಿಧಾನಸಭಾಧ್ಯಕ್ಷ ಕೆ.ಬಿ. ಕೋಳಿವಾಡ ತಮ್ಮ ಮತಕ್ಷೇತ್ರದ ಅಭಿವೃದ್ಧಿಯ ವಿಷಯದಲ್ಲಿ 6.78 ಅಂಕ ಮಾತ್ರ ಗಳಿಸಿದ್ದಾರೆ.

ಸಭಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವ ಕಾಗೋಡು ತಿಮ್ಮಪ್ಪ, ರಮೇಶಕುಮಾರ್, ಜಗದೀಶ ಶೆಟ್ಟರ್, ಕೆ.ಜಿ. ಬೋಪಯ್ಯ 14ನೇ ವಿಧಾನಸಭೆಯ ಸದಸ್ಯರೂ ಆಗಿದ್ದಾರೆ. ಇವರ ಪೈಕಿ ಬೋಪಯ್ಯ 7.71 ಅಂಕ ಗಳಿಸಿದ್ದಾರೆ. ಉಳಿದೆಲ್ಲರೂ 8ರ ಗಡಿ ದಾಟಿದ್ದಾರೆ. ಆದರೆ, ಕೋಳಿವಾಡ ಹಿನ್ನಡೆ ಅನುಭವಿಸಿದ್ದಾರೆ.

ಇನ್ನು ಉಪ ಸಭಾಧ್ಯಕ್ಷ ಎನ್.ಎಚ್. ಶಿವಶಂಕರ ರೆಡ್ಡಿ ಅವರಿಗೆ ಅಂಕ ಗಳಿಕೆಯಲ್ಲಿ ಪ್ರಥಮ ಶ್ರೇಣಿ ಪಡೆಯಲು ಸಾಧ್ಯವಾಗಿಲ್ಲ.

### ಕೆ.ಬಿ. ಕೋಳಿವಾಡ
ಕಾಂಗ್ರೆಸ್
ಜಿಲ್ಲೆ: ಹಾವೇರಿ
ಕ್ಷೇತ್ರ: ರಾಣೆಬೆನ್ನೂರು



6.78/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.04 |
| ಕುಡಿಯುವ ನೀರು | 6.59 |
| ವಿದ್ಯುತ್ | 6.07 |
| ರಸ್ತೆ | 7.11 |
| ಶಾಸಕರು ಕೈಗೆ ಸಿಗುತ್ತಾರಾ? | 6.74 |

### ಎನ್.ಎಚ್. ಶಿವಶಂಕರ ರೆಡ್ಡಿ
ಕಾಂಗ್ರೆಸ್
ಜಿಲ್ಲೆ: ಚಿಕ್ಕಬಳ್ಳಾಪುರ
ಕ್ಷೇತ್ರ: ಗೌರಿಬಿದನೂರು




5.25/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.49 |
| ಕುಡಿಯುವ ನೀರು | 3.86 |
| ವಿದ್ಯುತ್ | 4.56 |
| ರಸ್ತೆ | 5 |
| ಶಾಸಕರು ಕೈಗೆ ಸಿಗುತ್ತಾರಾ? | 4.91 |

## ಆಡಳಿತ ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರು

### ಅಶೋಕ್ ಎಂ. ಪಟ್ಟಣ
ಕಾಂಗ್ರೆಸ್
ಜಿಲ್ಲೆ: ಬೆಳಗಾವಿ
ಕ್ಷೇತ್ರ: ರಾಮದುರ್ಗ



6.76/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7 |
| ಕುಡಿಯುವ ನೀರು | 8.33 |
| ವಿದ್ಯುತ್ | 8 |
| ರಸ್ತೆ | 7.33 |
| ಶಾಸಕರು ಕೈಗೆ ಸಿಗುತ್ತಾರಾ? | 6.33 |

### ವಿ. ಸುನಿಲ್ ಕುಮಾರ್
ಬಿಜೆಪಿ
ಜಿಲ್ಲೆ: ಉಡುಪಿ
ಕ್ಷೇತ್ರ: ಕಾರ್ಕಳ



6.72/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.62 |
| ಕುಡಿಯುವ ನೀರು | 6.8 |
| ವಿದ್ಯುತ್ | 6.73 |
| ರಸ್ತೆ | 6.67 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |